

## ಎಬ್ಬಿಸಿ ಹೊಡೀತಾರೆ!

ಮೂರನೆಯ ತರಗತಿಯಲ್ಲಿ ಓದುತ್ತಿದ್ದ, ನನ್ನ ಮೊಮ್ಮಗ ಧೀರಜ್ ಇದ್ದಕ್ಕಿದ್ದಂತೆ ಒಂದು ದಿನ 'ನಾನು ಶಾಲೆಗೆ ಹೋಗೋಲ್ಲ!' ಎಂದು ಅಳುತ್ತಾ ನಿಂತ! 'ಯಾಕೆ? ಪುಟ್ಟಾ ಏನಾಯ್ತು?!' ಎಂದು ತಲೆ ನೇವರಿಸುತ್ತಾ ಕೇಳಿದೆ. ಅವನು 'ಸ್ಕೂಲಿನಲ್ಲಿ ನನಗೆ ತುಂಬಾ ಹೊಡೀತಾರೆ!' ಅಂದ. 'ಯಾಕೆ ಹೊಡೀತಾರೆ? ನೀನೇನಾದ್ರೂ ಗಲಾಟೆ ಮಾಡಿದೆಯಾ?!' ಎಂದು ಅವನ ತಾಯಿ ಕೇಳಿದಳು. 'ಇಲ್ಲಮ್ಮ! ನಾನು ಸುಮ್ಮನೇ ಮಲಗಿದ್ರೂ, ಎಬ್ಬಿಸಿ, ಎಬ್ಬಿಸಿ ಹೊಡೀತಾರೆ!' ಅಂದ.

**ಕೆ.ಜಿ. ಭದ್ರಣ್ಣವರ**

## ಯಾವ ಬುದ್ಧಿ?

ನನ್ನ ನಾದಿನಿ ಮಗ ಚಿನ್ಮಯ್, ದಸರಾ ರಜೆಯಲ್ಲಿ ನಮ್ಮ ಮನೆಗೆ ಬಂದಿದ್ದ. ತಿಂಡಿಯೇ ಆಗಲಿ, ಊಟವೇ ಆಗಲಿ ಅವನಿಗೆ ಇಷ್ಟವಾದುದನ್ನೇ ಮಾಡಿಕೊಡಬೇಕಿತ್ತು. ಅವನಿಗಿಷ್ಟವಾದ ದೋಸೆಗೆ ಒಂದೆಲಗ ಚಟ್ನಿ ಮಾಡಿ ಕೊಟ್ಟೆ. ಅವನಿಗೆ ಏನನ್ನಾದರೂ ತಿನ್ನಲು ಕೊಟ್ಟರೆ, ಅದರಲ್ಲಿ ಇರುವ ವಿಟಮಿನ್, ಅದನ್ನು ತಿನ್ನುವುದರಿಂದ ಕೂದಲಿಗೆ, ಚರ್ಮಕ್ಕೆ, ಕಣ್ಣಿಗೆ ಆಗುವ ಪ್ರಯೋಜನದ ಬಗ್ಗೆ ವಿವರಣೆ ಕೊಡುತ್ತಿದ್ದೆವು. 'ಒಂದೆಲಗ ತಿನ್ನುವುದು ಬುದ್ಧಿ ಬೆಳವಣಿಗೆ ಬಹಳ ಒಳ್ಳೆಯದು. ಪ್ರತಿನಿತ್ಯ ಒಂದೆಲಗ ತಿನ್ನಬೇಕು' ಅಂದೆ. ತಕ್ಷಣ ಅವನು 'ಎಂಥಾ ಬುದ್ಧಿ ಬೆಳೆಯುತ್ತೆ, ಒಳ್ಳೆಯ ಬುದ್ಧಿಯೋ? ಕೆಟ್ಟ ಬುದ್ಧಿಯೋ?' ಎಂದು ನನ್ನನ್ನೇ ಪ್ರಶ್ನೆ ಮಾಡಿದ! ಅದಕ್ಕೆ ನಗುವೇ ನನ್ನ ಉತ್ತರವಾಯಿತು.

**ಬಿ.ಎಸ್. ರಾಜಲಕ್ಷ್ಮಿ**

